# ಪ್ರೇಮ



ಪ್ರೀತಿ ಏಕೆ ಬದಲಾಗಿದೆ, ಹೇಗೆ ಬದಲಾಗಿದೆ ಎಂದು ಯೋಚಿಸುವ ಮೊದಲು ಪ್ರೀತಿ ಬದಲಾಗಿದೆಯೇ ಎನ್ನುವ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ಈ ಪ್ರಶ್ನೆಯೇ ಬೆನ್ನಿಗೆ 'ಪ್ರೀತಿ, ಪ್ರೇಮ ಬದಲಾಗಲು ಸಾಧ್ಯವೇ?' ಎನ್ನುವ ಪರಂಪರೆಪ್ರಿಯರ ಗೊಣಗಾಟವೂ ಕೇಳಬಹುದು. ಪ್ರೇಮ ಎನ್ನುವುದು ಅವರ ಪಾಲಿಗೆ ಮಧುರ ಮಾತ್ರವಲ್ಲ, ಅಮರವೂ ಹೌದು. ಅಂಥವರಿಗೆ ಮತ್ತೊಂದು ಪ್ರಶ್ನೆ – ಈ ಜಗತ್ತಿನಲ್ಲಿ ಬದಲಾಗದೆ ಇರುವುದು ಯಾವುದಾದರೂ ಇದೆಯೇ?

ಪ್ರೇಮದ ವ್ಯಕ್ತರೂಪಗಳನ್ನೇ ನೋಡಿ. ಮೇಘದೂತದ ಕಾಲದಿಂದ ಫೇಸ್‌ಬುಕ್‌ವರೆಗೆ ಯಾವೆಲ್ಲ ರೂಪಗಳಲ್ಲಿ ಅದು ವ್ಯಕ್ತಗೊಳ್ಳುತ್ತಾ ಬಂದಿದೆ. ಆದರೆ, ಪ್ರೇಮದ ನವಿರುತನ ಹಾಗೂ ಅದು ಉಂಟುಮಾಡುವ ಪುಳಕ ಮಾತ್ರ ಈಗಲೂ ಉಳಿದಿದೆ.

ರಾತ್ರಿಯೆಲ್ಲ ನಿದ್ದೆಗೆಟ್ಟು ಎದೆಯ ಭಾವನೆಗಳಿಗೆ ಅಕ್ಷರರೂಪ ನೀಡಿ ಬರೆದ ಪ್ರೇಮಪತ್ರವನ್ನು ಹುಡುಗಿಯ ನೋಟ್‌ಬುಕ್‌ನಲ್ಲಿ ಹುದುಗಿಸಿಟ್ಟು ಫಲಿತಾಂಶಕ್ಕಾಗಿ ಕಾಯುತ್ತಿದ್ದ ಹುಡುಗರನ್ನು ಪ್ರಸ್ತುತ ಕಾಣುವುದು ಕಷ್ಟ. ಪ್ರೇಮದ ರಾಯಭಾರ ಮಾಡುತ್ತಿದ್ದ ಹನುಮಂತರಿಗೂ ಇದು ಹೇಳಿಮಾಡಿಸಿದ ಕಾಲವಲ್ಲ. ಕಣ್ಣೋಟದ ಬದಲು ಬೆರಳತುದಿಯಿಂದಲೇ ಪ್ರೇಮದ ಸಂದೇಶಗಳು ರವಾನೆಯಾಗುತ್ತಿರುವ 'ಮೊಬೈಲ್ ಯುಗ' ಇಂದಿನದು. ಈ ಡಿಜಿಟಲ್ ಜಮಾನದಲ್ಲಿ ವಾಟ್ಸಾಫ್ ಹಾಗೂ ಸಾಮಾಜಿಕ ಜಾಲತಾಣಗಳು ಪ್ರೇಮದ ರಾಯಭಾರಿಗಳಾಗಿ ಕಾರ್ಯನಿರ್ವಹಿಸುತ್ತಿವೆ. 'ಫೇಸ್‌ಬುಕ್' ಅಂತೂ ಯಾವುದೋ ಸೀಮೆಯ ತರುಣನೊಂದಿಗೆ ಮತ್ತ್ಯಾವುದೋ ಸೀಮೆಯ ತರುಣಿಯನ್ನು ಬೆಸೆಯುತ್ತಿದೆ.

ಇದೇ ಫೆಬ್ರುವರಿ 4ನೇ ತಾರೀಖು 'ಫೇಸ್‌ಬುಕ್' ತನ್ನ 15ನೇ ಹುಟ್ಟುಹಬ್ಬ ಆಚರಿಸಿದೆ. ಈ ಒಂದೂವರೆ ದಶಕದಲ್ಲಿ ಅದು ವೇದಿಕೆಯಾದ ಪ್ರೇಮಕಥೆಗಳಿಗೆ ಲೆಕ್ಕವಿಲ್ಲ. ಸೋಲೋ ಗೆಲುವೋ ಅಮರಪ್ರೇಮವೋ ಮೋಸವೋ ಎಲ್ಲಕ್ಕೂ ಫೇಸ್‌ಬುಕ್ ಸಾಕ್ಷಿಯಾಗಿದೆ. ಆಪಾದನೆ, ಆರೋಪಗಳ ನಡುವೆಯೂ ಬದಲಾದ ಕಾಲಘಟ್ಟದಲ್ಲಿ ಯುವಮನಸ್ಸುಗಳ ಪಿಸುಮಾತಿಗೆ, ಒಲಿದ ಹೃದಯಗಳ ನವಿರು ಸೆಳೆತಕ್ಕೆ ಅಂಗಳವಾಗಿದೆ.

## ಪ್ರೇಮ ಪುರಾಣಗಳ ಭೂಮಿಕೆ

2004ರ ಫೆ. 4ರಂದು 'ಫೇಸ್‌ಬುಕ್' ಎನ್ನುವ ಮಾಯಾಲೋಕ ತೆರೆದುಕೊಂಡಾಗ ಮುಂದೊಂದು ದಿನ ಇದು ಪ್ರೇಮಕಥನಗಳ ಮುಖ್ಯ ಭೂಮಿಕೆಯಾಗಲಿದೆ ಎಂದು ಯಾರೂ ಅಂದುಕೊಂಡಿರಲಿಲ್ಲ. ತನಗಿಂತ ಮೊದಲು ಹುಟ್ಟಿದ ಎಲ್ಲಾ ಡೇಟಿಂಗ್ ಆ್ಯಪ್ – ವೆಬ್ ತಾಣಗಳಿಗಿಂತ ಒಂದು ಹೆಜ್ಜೆ ಮುಂದೆ ನಿಂತಿರುವ ಈ ಸಾಮಾಜಿಕ ಜಾಲತಾಣ–ಸ್ನೇಹಕ್ಕೂ ಸೈ, ಪ್ರೀತಿಗೂ ಜೈ. ಅದರ ಅಪಾರ ಧಾರಾಳಿತನದ ದುರುಪಯೋಗ ಆಗಿರುವುದೂ ಇದೆ. ಪ್ರೀತಿಯ ಹೆಸರಿನಲ್ಲಿ ನಿರಾಶೆಯ ನಿಟ್ಟುಸಿರುಗಳೂ ಸಾವುನೋವುಗಳೂ ರಕ್ತದ ಕಲೆಗಳೂ ಫೇಸ್‌ಬುಕ್ ಅನ್ನು ಬಾಧಿಸಿವೆ. ಆದರೆ, ಇನ್ನೊಂದು ದಿಕ್ಕಿನಲ್ಲಿ ಅನನ್ಯ ಅವ್ಯಾಜ ಪ್ರೇಮಕಥನಗಳೂ ಇಲ್ಲಿ ದಾಖಲಾಗಿವೆ. ಎಲ್ಲ ಸಂಶೋಧನೆ, ಸಲಕರಣೆಗಳೂ ಜನಪರವಾಗಿರುವುದರ ಜೊತೆಗೆ ಘಾತುಕತನದ ಮುಖವೊಂದನ್ನೂ ಹೊಂದಿರುತ್ತವೆ. ಫೇಸ್‌ಬುಕ್ ಇದಕ್ಕೆ ಹೊರತೇನೂ ಅಲ್ಲ.

ಆಧುನಿಕ ಸಂದರ್ಭದ ವೈಪರೀತ್ಯಗಳನ್ನು ನೋಡಿ: ಕಾಲೇಜು, ಓದು, ಟ್ಯೂಷನ್, ಪ್ರಾಜೆಕ್ಟ್‌ಗಳು, ಅಸೈನ್‌ಮೆಂಟ್‌ಗಳು, ಪರೀಕ್ಷೆ – ಹೀಗೆ ಉಂಡಾಡುವ ವಯಸ್ಸಿನಲ್ಲಿ ಮಣಭಾರದ ಹೊಣೆಗಳನ್ನು ಹೊತ್ತು ತಾರುಣ್ಯದ ಸೊಗಸಾದ ದಿನಗಳನ್ನು ತಮ್ಮದಲ್ಲವೆಂಬಂತೆ ಕಳೆದುಬಿಡುವ ಕಾಲವಿದು. ಇನ್ನು, ಕೊನೆಯ ಸೆಮಿಸ್ಟರ್ ಮುಗಿಯುವ ಮೊದಲೇ ಬೆನ್ನುಹತ್ತುವ ನೌಕರಿಗಳು, ಬಿಡುವಿಲ್ಲದ ದುಡಿದ, ಇನ್‌ಕ್ರೀಮೆಂಟ್, ಪ್ರಮೋಶನ್‌ಗಳ ಆತುರದ ಧಾವಂತ. ಸಾವಧಾನವನ್ನು ಕಳೆದುಕೊಂಡ ಈ ಬದುಕಿನಲ್ಲೂ ಪ್ರೀತಿಸುವ–ಪ್ರೀತಿಸುವವರು ಬೇಕೆನ್ನುವ ಭಾವದಿಂದ ಪಾರಾಗುವುದು ಸುಲಭವಲ್ಲ, ಸಹಜವೂ ಅಲ್ಲ. ಬಯಕೆಗಳ ಈ ತಹತಹವನ್ನೇ ಬಂಡವಾಳವಾಗಿಸಿಕೊಂಡಂತೆ ಕಾಣಿಸುವ ಟಿಂಡರ್, ಬಂಬಲ್, ಓಕೆಕ್ಯುಪಿಡ್ ಡೇಟಿಂಗ್, ಆಝುರ್, ಎಲೈಟ್ ಸಿಂಗಲ್, ವೂ, ಮೋಕೊದಂತಹ ಡೇಟಿಂಗ್ ಆ್ಯಪ್‌ಗಳೂ ವೆಬ್‌ಸೈಟುಗಳೂ, ಜೀವನ್‌ಸಾಥಿ, ಭಾರತ್ ಮೆಟ್ರಿಮೊನಿ, ಶಾದಿ ಡಾಟ್ ಕಾಮ್, ಕಮ್ಯುನಿಟಿ ಮೆಟ್ರಿಮೊನಿಯಂತಹ ವೈವಾಹಿಕ ಬಂಧ ಬೆಸೆಯುವ ತಾಣಗಳೂ ಕಾರ್ಯ ನಿರ್ವಹಿಸುತ್ತಿವೆ. ಈ ಡಿಜಿಟಲ್ ಜಾಲದಲ್ಲಿ ಸಂಗಾತಿಯನ್ನು ಹುಡುಕಿಕೊಳ್ಳುವ ಹಂಬಲದಲ್ಲಿ, ಪ್ರೀತಿಯನ್ನು ಸೂರೆಗೊಳ್ಳಬೇಕೆನ್ನುವ ಸಂಕಲ್ಪದಲ್ಲಿ ಭ್ರಮಾಲೋಕ ಸೃಷ್ಟಿಸುವ ಅಪಾಯಗಳಿಗೆ ಈಡಾಗುವುದೂ ಇದೆ. ವಿವಾಹಾಕಾಂಕ್ಷಿಗಳ ಮನೆ–ಕುಟುಂಬ, ಅಮ್ಮ–ಅಪ್ಪ, ಸಹೋದರಿ–ಸಹೋದರರು, ಎತ್ತರ, ತೂಕ, ಮೈಬಣ್ಣ, ನೌಕರಿ, ಸಂಬಳ, ಅಷ್ಟೇ ಏಕೆ, ವರ್ಷವರ್ಷವೂ ಸಿಗಬಹುದಾದ ಇನ್‌ಕ್ರೀಮೆಂಟುಗಳೂ ಸೇರಿದಂತೆ ಮಾಹಿತಿಗಳ ಮಹಾಪೂರವೇ ಇಲ್ಲಿದೆ. ಹೌದು, ಎಲ್ಲವೂ ಇಲ್ಲಿದೆ. ಆದರೆ, ಪ್ರೇಮದ ಆರ್ದ್ರತೆ, ಪಿಸುಮಾತು ಇದೆಯೇ?

ಡಿಜಿಟಲ್ ಜಗತ್ತು ಎಷ್ಟೇ ಆಧುನಿಕವೆಂದರೂ ಸಾಂಪ್ರದಾಯಿಕ ರಾಶಿ–ನಕ್ಷತ್ರ, ನಾಡಿ, ಸಾಲಾವಳಿಗಳು ಇಲ್ಲಿಯೂ ಮೂಗುತೂರಿಸಿವೆ. ಮನೆ–ಆಸ್ತಿ, ಸಂಬಂಧಿಕರು, ನೌಕರಿ, ಸಂಬಳ ಎಲ್ಲಕ್ಕೂ ಅಲ್ಲಿ ಜಾಗವಿದೆ. ಆದರೆ ಈಗಿನ ಯುವಜನ ಮುಖ್ಯವೆಂದೇ ಪರಿಗಣಿಸುವ ಮನಸಿನ ಬೆಸುಗೆ 'ಕಂಫರ್ಟ್ ಲೆವೆಲ್'ಗೆ ಜಾಗವಿಲ್ಲ. ಈ ಕಂಫರ್ಟ್‌ನ ನಿರೀಕ್ಷೆಗೆ ಉತ್ತರದಂತೆ ಕಾಣುತ್ತಿರುವುದೇ 'ಫೇಸ್‌ಬುಕ್'ನ ಯಶಸ್ಸಿಗೆ ಕಾರಣವೆನ್ನಿಸುತ್ತದೆ.

ಯಾವುದೇ ಆಮಿಷ, ನಿರೀಕ್ಷೆ, ಭರವಸೆ, ಗಾಂಭೀರ್ಯವಿಲ್ಲದೇ ಫೇಸ್‌ಬುಕ್ ಸ್ನೇಹ ಚಿಗುರೊಡೆಯುತ್ತದೆ. ಹಾಡುಹರಟೆ, ಲೋಕಾರೂಢಿ